1. "ನೋಂದಾಯಿತ ಅಂಚೆ ಸ್ವೀಕೃತಿ ನಿರೀಕ್ಷೆ"

2, 3 & 4. "By Post"

ನಗರ ಮತ್ತು ಗ್ರಾಮಾಂತರ ಯೋಜನಾ
ಅಪರ ನಿರ್ದೇಶಕರ ಕಛೇರಿ,
ಮಿನಿ ವಿಧಾನ ಸೌಧ, ಧಾರವಾಡ-580 001
ದೂರವಾಣಿ ಸಂ: 0836-2447901

ಅಪರ ನಿರ್ದೇಶಕರ ಕಚೇರಿ,
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ
ಧಾರವಾಡ ವಲಯ
ಮಿನಿ ವಿಧಾನ ಸೌಧ, ಧಾರವಾಡ-580001
ಇ-ಮೇಲ್: addl.dtcp@ka.gov.in Website:http:/www.dharwad.dtcp.gov.in ದೂರವಾಣಿ: 0836-2447901

ಸಂಖ್ಯೆ:-ನಗ್ರಾಯೋ/ವ.ಕ.ಧಾ./03/ವಿನ್ಯಾಸ-72/2023-24/1725-1728 ದಿನಾಂಕ:- 30-10-2023

## "ತಾಂತ್ರಿಕ ಅನುಮೋದನೆ"

**ವಿಷಯ:-** ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕು ರೇವಡಿಹಾಳ ಗ್ರಾಮದ ಸ.ನಂ.91/ಬ್ಲಾಕ್/14 ಕ್ಷೇತ್ರ:2ಎ-00ಗುಂಟೆ, ಸ.ನಂ.92/ಬ್ಲಾಕ್/2 ಕ್ಷೇತ್ರ:3ಎ-00ಗುಂಟೆ ಪೈಕಿ ಕ್ಷೇತ್ರ:2ಎ-20ಗುಂಟೆ, ಸ.ನಂ.93/ಬ್ಲಾಕ್/1 ಕ್ಷೇತ್ರ:1ಎ-21ಗುಂಟೆ, ಸ.ನಂ.93/ಬ್ಲಾಕ್/2 ಕ್ಷೇತ್ರ:0ಎ-10ಗುಂಟೆ, ಸ.ನಂ.93/ಬ್ಲಾಕ್/6 ಕ್ಷೇತ್ರ:1ಎ-11ಗುಂಟೆ ಸ.ನಂ.93/ಬ್ಲಾಕ್/7 ಕ್ಷೇತ್ರ:1ಎ-22ಗುಂಟೆ, ಸ.ನಂ.94/ಬ್ಲಾಕ್/1 ಕ್ಷೇತ್ರ:0ಎ-33ಗುಂಟೆ, ಸ.ನಂ.94/ಬ್ಲಾಕ್/2 ಕ್ಷೇತ್ರ:0ಎ-33ಗುಂಟೆ, ಸ.ನಂ.94/ಬ್ಲಾಕ್/3 ಕ್ಷೇತ್ರ:1ಎ-23ಗುಂಟೆ ಪೈಕಿ ಕ್ಷೇತ್ರ:0ಎ-02ಗುಂಟೆ "ಅ" ಖರಾಬ ಹೊರತುಪಡಿಸಿ ಉಳದ ಕ್ಷೇತ್ರ:1ಎ-21ಗುಂಟೆ, ಸ.ನಂ:94/ಬ್ಲಾಕ್/4 ಕ್ಷೇತ್ರ:1ಎ-20ಗುಂಟೆ, ಸ.ನಂ.102/ಬ್ಲಾಕ್/1 ರಲ್ಲಿ ಕ್ಷೇತ್ರ:0ಎ-27ಗುಂಟೆ ಹಾಗೂ ಸ.ನಂ.102/ಬ್ಲಾಕ್/2 ಕ್ಷೇತ್ರ:0ಎ-27ಗುಂಟೆ ಒಟ್ಟು ಕ್ಷೇತ್ರ:15ಎ-05ಗುಂಟೆ ಭೂ ಪರಿವರ್ತಿತ ಜಮೀನಿಗೆ ವಸತಿ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡುವ ಕುರಿತು.

**ಉಲ್ಲೇಖ:-**
1) ಜಿಲ್ಲಾಧಿಕಾರಿಗಳು, ಧಾರವಾಡ., ಇವರ ಭೂ ಪರಿವರ್ತನಾ ಅಧಿಕೃತ ಜ್ಞಾಪನಾ ಪತ್ರ ಅರ್ಜಿ ಸಂಖ್ಯೆ:- 409310, 409309, 409299, 409301, 409303, 409304 ಹಾಗೂ 409306 ದಿನಾಂಕ:-14-11-2022, 409300, 409302, 409305, 409307 ಹಾಗೂ 409308 ದಿನಾಂಕ:-14-11-2022 ಹಾಗೂ ತಿದ್ದುಪಡಿ ಆದೇಶ ದಿನಾಂಕ:-15-09-2023.
2) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಕಾರ್ಯಾಲಯ, ರೇವಡಿಹಾಳ, ತಾ:ಹುಬ್ಬಳ್ಳಿ., ಇವರ ಪತ್ರ ಸಂಖ್ಯೆ:-ಗ್ರಾ.ಪಂ.ದೇ/ನ-2/4/022-23, ದಿನಾಂಕ:- 06-03-2023 (ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ., ರವರ ಕಚೇರಿ ಸ್ವೀಕೃತಿ ದಿನಾಂಕ:-05-04-2023) .
3) ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ., ರವರ ಕಚೇರಿ ಪತ್ರ ಸಂಖ್ಯೆ:-ನಗ್ರಾಯೋಸನಿಧಾ/ವ.ವಿನ್ಯಾಸ/ಸಿಆರ್-01/2023-24/1253, ದಿನಾಂಕ:- 19-08-2023.
4) ಈ ಕಛೇರಿ ಪತ್ರ ಸಂಖ್ಯೆ:-ನಗ್ರಾಯೋ/ವ.ಕ.ಧಾ./03/ವಿನ್ಯಾಸ-72/2023-24/1300, ದಿನಾಂಕ:-24-08-2023.
5) ಈ ಕಛೇರಿ ಪತ್ರ ಸಂಖ್ಯೆ:-ನಗ್ರಾಯೋ/ವ.ಕ.ಧಾ./03/ವಿನ್ಯಾಸ-72/2023-24/1394, ದಿನಾಂಕ:-07-09-2023.
6) ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ., ರವರ ಕಚೇರಿ ಪತ್ರ ಸಂಖ್ಯೆ:-ನಗ್ರಾಯೋಸನಿಧಾ/ವಾ.ಏ.ವಿನ್ಯಾಸ/ಸಿಆರ್-1/2023-24/1670, ದಿನಾಂಕ:-29-09-2023 (ಈ ಕಚೇರಿ ಸ್ವೀಕೃತಿ ದಿನಾಂಕ:-30-09-2023).
7) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ ಕೈಪಿಡಿ ಸಂಖ್ಯೆ:-ಗ್ರಾಅಪ 86 ಗ್ರಾಪಂಅ 2014, ದಿನಾಂಕ:-11-11-2014.

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರನ್ವಯ ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕು ರೇವಡಿಹಾಳ ಗ್ರಾಮದ ಸ.ನಂ.91/ಬ್ಲಾಕ್/14 ಕ್ಷೇತ್ರ:2ಎ-00ಗುಂಟೆ, ಸ.ನಂ.92/ಬ್ಲಾಕ್/2 ಕ್ಷೇತ್ರ:3ಎ-00ಗುಂಟೆ ಪೈಕಿ ಕ್ಷೇತ್ರ:2ಎ-20ಗುಂಟೆ, ಸ.ನಂ.93/ಬ್ಲಾಕ್/1 ಕ್ಷೇತ್ರ:1ಎ-21ಗುಂಟೆ, ಸ.ನಂ.93/ಬ್ಲಾಕ್/2 ಕ್ಷೇತ್ರ:0ಎ-10ಗುಂಟೆ, ಸ.ನಂ.93/ಬ್ಲಾಕ್/6 ಕ್ಷೇತ್ರ:

1ಎ-11ಗುಂಟೆ ಸ.ನಂ.93/ಬ್ಲಾಕ್/7 ಕ್ಷೇತ್ರ:1ಎ-22ಗುಂಟೆ, ಸ.ನಂ.94/ಬ್ಲಾಕ್/1 ಕ್ಷೇತ್ರ:0ಎ-33ಗುಂಟೆ, ಸ.ನಂ.94/ಬ್ಲಾಕ್/2 ಕ್ಷೇತ್ರ:0ಎ-33ಗುಂಟೆ, ಸ.ನಂ.94/ಬ್ಲಾಕ್/3 ಕ್ಷೇತ್ರ:1ಎ-23ಗುಂಟೆ ಪೈಕಿ ಕ್ಷೇತ್ರ:0ಎ-02ಗುಂಟೆ "ಅ" ಖರಾಬ ಹೊರತುಪಡಿಸಿ ಉಳಿದ ಜಮೀನು ಕ್ಷೇತ್ರ:1ಎ-21ಗುಂಟೆ, ಸ.ನಂ:94/ಬ್ಲಾಕ್/4 ಕ್ಷೇತ್ರ:1ಎ-20ಗುಂಟೆ, ಸ.ನಂ.102/ಬ್ಲಾಕ್/1 ಕ್ಷೇತ್ರ: 0ಎ-27ಗುಂಟೆ ಹಾಗೂ ಸ.ನಂ.102/ಬ್ಲಾಕ್/2 ಕ್ಷೇತ್ರ:0ಎ-27ಗುಂಟೆ ಒಟ್ಟು ಕ್ಷೇತ್ರ:15ಎ-05ಗುಂಟೆ ಜಮೀನಿಗೆ ವಸತಿ / Residential Layout ಉದ್ದೇಶಕ್ಕಾಗಿ ಜಿಲ್ಲಾಧಿಕಾರಿಗಳು, ಧಾರವಾಡ., ರವರು ಭೂ ಪರಿವರ್ತನೆ ಆದೇಶ ಹೊರಡಿಸಿರುತ್ತಾರೆ. ಉಲ್ಲೇಖ (2) ರನ್ವಯ ಪ್ರಶ್ನಿತ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ತಯಾರಿಸಿ ತಾಂತ್ರಿಕ ಅನುಮೋದನೆ ನೀಡಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಕಾರ್ಯಾಲಯ, ದೇವರಗುಡಿಹಾಳ, ತಾ:ಹುಬ್ಬಳ್ಳಿ., ಇವರು ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ., ಇವರನ್ನು ಕೋರಿರುತ್ತಾರೆ. ಉಲ್ಲೇಖ (3) ರನ್ವಯ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ., ಇವರು ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ನಂತರ, ಉಲ್ಲೇಖ (4) ರ ಈ ಕಛೇರಿ ಪತ್ರದಲ್ಲಿ ಪರಿಶೀಲನೆಗೆ ಅಗತ್ಯವಿರುವ ಮಾಹಿತಿ / ದಾಖಲೆಗಳನ್ನು ಸಲ್ಲಿಸಲು ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ., ಇವರಿಗೆ ತಿಳಿಸಲಾಗಿತ್ತು. ಅಲ್ಲದೇ, ಉಲ್ಲೇಖ (5) ರ ಈ ಕಚೇರಿ ಪತ್ರದಲ್ಲಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿ / ದಾಖಲೆಗಳು ಸಲ್ಲಿಕೆಯಾಗದ ಕಾರಣ ಪ್ರಸ್ತಾವನೆಯನ್ನು ವಿಲೆಪಡಿಸಲಾಗಿತ್ತು. ಪ್ರಸ್ತುತ ಉಲ್ಲೇಖ (6) ರಲ್ಲಿ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ., ಇವರು ಸದರಿ ಅಗತ್ಯ ಮಾಹಿತಿ / ದಾಖಲೆಗಳನ್ನು ಈ ಕಚೇರಿಗೆ ಸಲ್ಲಿಸಿರುತ್ತಾರೆ.

ಪ್ರಯುಕ್ತ, ಉಲ್ಲೇಖ (3) ಹಾಗೂ (6) ರಲ್ಲಿ ಸಲ್ಲಿಸಿರುವ ಮಾಹಿತಿ / ವರದಿ / ದಾಖಲೆ / ವಸತಿ ವಿನ್ಯಾಸದ ಎಲ್ಲೆಯ ನಕ್ಷೆ ಹಾಗೂ ಅರ್ಜಿದಾರರ ಮನವಿ ವಿನ್ಯಾಸ ನಕ್ಷೆಯನ್ನು ಪರಿಶೀಲಿಸಿ, ರಸ್ತೆ ಪರಿಚಲನೆಯನ್ನು ಸೂಕ್ತವಾಗಿ ಮಾರ್ಪಾಡು ಮಾಡಿ ಯೋಜನಾ ತತ್ವಗಳಡಿಯಲ್ಲಿ ಹಾಗೂ ಇಲಾಖಾ ನಿಯಮಾವಳಿಗಳನ್ವಯ ಹಾಗೂ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ., ಇವರ ಪ್ರಸ್ತಾವನೆ ಹಾಗೂ ಶಿಫಾರಸ್ಸಿನನ್ವಯ, ಉಲ್ಲೇಖ (7) ರ ಕೈಪಿಡಿಯಂತೆ ಪ್ರಶ್ನಿತ ಜಮೀನಿನ ಒಟ್ಟು **ಕ್ಷೇತ್ರ:15ಎ-05ಗುಂಟೆ** Residential Layout / ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿಗೆ ವಸತಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಲಾಗಿದ್ದು, ಸದರಿ ವಿನ್ಯಾಸ ನಕ್ಷೆಯಲ್ಲಿ ಈ ಕೆಳಕಂಡಂತೆ ಭೂ ಉಪಯೋಗ ವಿಶ್ಲೇಷಣೆ ಹಾಗೂ ನಿವೇಶನಗಳನ್ನು ಅಳವಡಿಸಲಾಗಿದೆ.

| **ಭೂ ಉಪಯೋಗ ವಿಶ್ಲೇಷಣೆ** | | | |
|---|---|---|---|
| **ಕ್ರ.ಸಂ.** | **ಭೂ ಉಪಯೋಗ** | **ವಿಸ್ತೀರ್ಣ (ಚ.ಮೀ.)** | **ಶೇಕಡವಾರು** |
| 1. | ವಸತಿ | 33508.97 | 54.74 |
| 2. | ಉದ್ಯಾನವನ / ಬಫರ್ | 5833.44 | 09.53 |
| 3. | ನಾಗರೀಕ ಸೌಲಭ್ಯ | 2688.11 | 04.40 |
| 4 | ಎಸ್.ಟಿ.ಪಿ. | 324.60 | 00.53 |
| 5. | ರಸ್ತೆ | 18852.73 | 30.80 |
| | **ಒಟ್ಟು** | **61207.85** | **100.00** |

| **ನಿವೇಶನಗಳ ವಿವರ** | | |
|---|---|---|
| **ಕ್ರ.ಸಂ.** | **ನಿವೇಶನಗಳ ಅಳತೆಗಳು (ಮೀ. ಗಳಲ್ಲಿ)** | **ಸಂಖ್ಯೆ** |
| 1. | 9 ಮೀ. X 15 ಮೀ. | 20 |
| 2. | 9 ಮೀ. X 12 ಮೀ. | 147 |
| 3. | 9 ಮೀ. X ಅನಿಯತ. | 77 |
| 4. | ಅನಿಯತ (ಅ) | 38 |
| | **ಒಟ್ಟು** | **282** |

ಸದರಿ ವಿನ್ಯಾಸವನ್ನು ಕಾರ್ಯಗತಗೊಳಿಸುವ ಸಂಬಂಧ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಕಾರ್ಯಾಲಯ, ದೇವರಗುಡಿಹಾಳ, ತಾ:ಹುಬ್ಬಳ್ಳಿ., ರವರು ವಿನ್ಯಾಸ ಅನುಮೋದನೆ ಆದೇಶ ಹೊರಡಿಸಬೇಕಾಗಿದ್ದು. ಉಲ್ಲೇಖ (7) ರ ಕೈಪಿಡಿಯಲ್ಲಿನ ಮಾರ್ಗಸೂಚಿಗಳನ್ನು ಹಾಗೂ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಅನುಸರಿಸುವ ನಿಬಂಧನೆಗಳಿಗೆ ಒಳಪಟ್ಟು ಕಾರ್ಯರೂಪಕ್ಕೆ ತರಲು ತಾಂತ್ರಿಕ ಅನುಮೋದನೆ ನೀಡಲಾಗಿದೆ.

1. **ಈ ವಿನ್ಯಾಸವು ಅನುಮೋದನೆ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ನಿಯಮಾನುಸಾರ ಸ್ಥಳೀಯ ಸಂಸ್ಥೆಯಿಂದ ನವೀಕರಿಸಿಕೊಳ್ಳತಕ್ಕದ್ದು.**

2. ರೂಪರೇಖೆಯನ್ನು ಕಾರ್ಯಗತ ಮಾಡುವ ಮೊದಲು ಕರ್ನಾಟಕ **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ /** ಪುರಸಭೆ / ಪಟ್ಟಣ ಪಂಚಾಯತಿ ಕಾಯ್ದೆಯಡಿ ಅನುಮತಿ ಪಡೆಯಬೇಕು.
3. ಅನುಮೋದಿತ ವಿನ್ಯಾಸದಲ್ಲಿರುವಂತೆಯೇ ನಿವೇಶನಗಳು, ಉದ್ಯಾನವನ / ಬಫರ್, ನಾಗರೀಕ ಸೌಲಭ್ಯ, ಎಸ್.ಟಿ.ಪಿ. ಹಾಗೂ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕು.
4. ಅಭಿವೃದ್ಧಿ ಶುಲ್ಕವನ್ನು ಅಂದಾಜು ಪಟ್ಟಿಯಂತೆ ಹಾಗೂ ಇತರೆ ಶುಲ್ಕಗಳನ್ನು ಕಾನೂನು ಪ್ರಕಾರ ಹಾಗೂ ಕಾಲ ಕಾಲಕ್ಕೆ ಹೊರಡಿಸುವ ಸರ್ಕಾರಿ ಆದೇಶಗಳನ್ವಯ ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಕಾರ್ಯಾಲಯ, ದೇವರಗುಡಿಹಾಳ, ತಾ:ಹುಬ್ಬಳ್ಳಿ., ಇವರಿಗೆ ಮುಂಗಡವಾಗಿ ಕಟ್ಟತಕ್ಕದ್ದು.
5. ಅನುಮೋದಿತ ವಸತಿ ವಿನ್ಯಾಸದಲ್ಲಿರುವ ಉದ್ಯಾನವನಕ್ಕಾಗಿ 5833.44 ಚ.ಮೀ. (ಶೇ.09.53), ನಾಗರೀಕ ಸೌಲಭ್ಯಕ್ಕಾಗಿ 2688.11 ಚ.ಮೀ. (ಶೇ.04.40), ಎಸ್.ಟಿ.ಪಿ. ಗಾಗಿ 324.60 ಚ.ಮೀ. (ಶೇ.0.53) ಮತ್ತು ರಸ್ತೆಗಾಗಿ 18852.73 ಚ.ಮೀ. (ಶೇ.30.80) ರಷ್ಟು ಪ್ರದೇಶಗಳನ್ನು, ಅರ್ಜಿದಾರರಿಗೆ / ಅಭಿವೃದ್ಧಿದಾರರಿಗೆ **ಯಾವುದೇ ಪರಿಹಾರವನ್ನು ನೀಡದೆ <u>ಪುಕ್ಕಟೆಯಾಗಿ ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಕಾರ್ಯಾಲಯ, ದೇವರಗುಡಿಹಾಳ, ತಾ:ಹುಬ್ಬಳ್ಳಿ., ರವರು ಪಡೆಯತಕ್ಕದ್ದು ಹಾಗೂ ಅರ್ಜಿದಾರರು ಹಸ್ತಾಂತರಿಸತಕ್ಕದ್ದು.</u>**
6. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ **ಪೂರ್ವಾನುಮತಿಯಿಲ್ಲದೆ** ವಿನ್ಯಾಸದಲ್ಲಿ ಯಾವುದೇ **ಬದಲಾವಣೆಯನ್ನು ಮಾಡಬಾರದು.**
7. ಸದರಿ ಜಮೀನಿನ ವಿನ್ಯಾಸ ಅನುಮೋದನೆ ಕುರಿತಂತೆ ಅರ್ಜಿದಾರರು / ಅಭಿವೃದ್ಧಿದಾರರು **ರೆರಾ ಪ್ರಾಧಿಕಾರದಲ್ಲಿ ಕಡ್ಡಾಯವಾಗಿ ನೊಂದಣಿ** ಮಾಡಿಕೊಳ್ಳತಕ್ಕದ್ದು ಹಾಗೂ ಸದರಿ ಜಮೀನಿನ ವಿನ್ಯಾಸ ಅನುಮೋದನೆ / ನಿವೇಶನ ಬಿಡುಗಡೆ / ಕಟ್ಟಡ ಪರವಾನಿಗೆ ನೀಡುವ ಕುರಿತಂತೆ **<u>ಕರ್ನಾಟಕ ರಿಯಲ್ ಎಸ್ಟೇಟ್ ರೆಗ್ಯುಲೇಟರಿ ಪ್ರಾಧಿಕಾರ ರವರ ಪತ್ರ ಸಂಖ್ಯೆ:- ರೇರಾ /ತಾಂತ್ರಿಕ/1220/ಸಿ.ಆರ್/2020-21, ದಿನಾಂಕ:-29-10-2020 ರನ್ವಯ</u>** ರೇರಾ ಪ್ರಾಧಿಕಾರದಲ್ಲಿ ಅರ್ಜಿದಾರರು ನೋಂದಣಿಯಾಗಿರುವ ಕುರಿತು ಸ್ಥಳೀಯ ಸಂಸ್ಥೆಯು ಪರಿಶೀಲಿಸಿ ನಿವೇಶನಗಳನ್ನು ಬಿಡುಗಡೆ ಮಾಡುವ ಕುರಿತು **ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.**
8. ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರತಕ್ಕ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡು ಕಡೆ ಹಾಗೂ ಉದ್ಯಾನವನದಲ್ಲಿ ಹೊಸ ಸಸಿಗಳನ್ನು ಬೆಳೆಸಲು ಸೂಕ್ತ ಕ್ರಮ ಕೈಗೊಳ್ಳಬೇಕು.
9. ಸ್ಥಳದಲ್ಲಿ ಹಾದು ಹೋಗಿರುವ ಎಲ್ಲಾ ವಿದ್ಯುತ್ ವಾಹಕ ತಂತಿಗಳು, ದೂರವಾಣಿ ತಂತಿಗಳನ್ನು ಮತ್ತು ಪೈಪ್‌ಲೈನ್‌ಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪೂರ್ವಾನುಮತಿ ಪಡೆದು ನಿಯಮಾನುಸಾರ ರಸ್ತೆ ಪಕ್ಕಕ್ಕೆ ಸ್ಥಳಾಂತರಿಸುವುದು. ಹಾಗೂ ಈ ಕುರಿತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಕಾರ್ಯಾಲಯ, ದೇವರಗುಡಿಹಾಳ, ತಾ:ಹುಬ್ಬಳ್ಳಿ., ರವರು ಪರಿಶೀಲಿಸಿ ವಿನ್ಯಾಸ ಅನುಮೋದಿಸುವುದು.
10. ವಿನ್ಯಾಸ ಪ್ರದೇಶವನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಿ ನಿವೇಶನಗಳನ್ನು ಸಂಬಂದಪಟ್ಟ ಸ್ಥಳೀಯ ಸಂಸ್ಥೆಯು ನಿವೇಶನ ಬಿಡುಗಡೆ ಮಾಡಿದ ನಂತರ ಬೇರೆಯವರಿಗೆ ನೊಂದಣಿ ಮಾಡತಕ್ಕದ್ದು ಹಾಗೂ ಅಭಿವೃದ್ಧಿ ಕಾಮಗಾರಿಗಳು ಮುಗಿದ ನಂತರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಕಾರ್ಯಾಲಯ, ದೇವರಗುಡಿಹಾಳ, ತಾ:ಹುಬ್ಬಳ್ಳಿ., ಇವರಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ಪಡೆಯತಕ್ಕದ್ದು.
11. **ಸದರಿ ವಿನ್ಯಾಸದಲ್ಲಿನ ನಿವೇಶನಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ ಪತ್ರ ಸಂಖ್ಯೆ:-ಗ್ರಾಅಪ 86 ಗ್ರಾಪಂಅ 2014, ದಿನಾಂಕ:-11-11-2014 ರಲ್ಲಿನ ಕೈಪಿಡಿಯ ಮಾರ್ಗಸೂಚಿಯನ್ವಯ ಹಾಗೂ ಕಾಲಕಾಲಕ್ಕೆ ಬಿಡುಗಡೆಯಾಗುವ ಸರ್ಕಾರದ ಸುತ್ತೋಲೆಗಳನ್ವಯ ನಿಯಮಾನುಸಾರ ಬಿಡುಗಡೆಗೊಳಿಸುವ ಕುರಿತು ಸ್ಥಳೀಯ ಸಂಸ್ಥೆಯು ಸೂಕ್ತ ಕ್ರಮಕೈಗೊಳ್ಳತಕ್ಕದ್ದು. ಹಾಗೂ ವಿನ್ಯಾಸ ಪ್ರದೇಶವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ನಿವೇಶನಗಳನ್ನು ಸಂಬಂದಪಟ್ಟ ಗ್ರಾಮ ಪಂಚಾಯಿತಿಯು ನಿವೇಶನ ಬಿಡುಗಡೆ ಮಾಡಿದ ನಂತರ ಬೇರೆಯವರಿಗೆ ನೊಂದಣಿ ಮಾಡತಕ್ಕದ್ದು.**
12. ವಿನ್ಯಾಸವನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರವೇ ಗ್ರಾಮ ಪಂಚಾಯಿತಿಯಿಂದ / ಪುರಸಭೆಯಿಂದ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡತಕ್ಕದ್ದು.
13. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ ಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
14. **<u>ವಿನ್ಯಾಸವನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರವೇ ಗ್ರಾಮ ಪಂಚಾಯಿತಿಯಿಂದ / ಪಟ್ಟಣ ಪಂಚಾಯತಿಯಿಂದ / ಪುರಸಭೆಯಿಂದ ಕಟ್ಟಡ ನಿರ್ಮಾಣಕ್ಕೆ ಅನುಮತಿ ಪಡೆಯತಕ್ಕದ್ದು. ಅರ್ಜಿದಾರರು ಅಭಿವೃದ್ಧಿ ಕಾಮಗಾರಿಗಳು ಮುಗಿದ ನಂತರ ಸಂಬಂಧಪಟ್ಟ ಗ್ರಾಮ ಪಂಚಾಯತಿ / ಪುರಸಭೆಯಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ಪಡೆಯತಕ್ಕದ್ದು.</u>**
15. ಸದರಿ ಜಮೀನಿನಲ್ಲಿರುವ ಹಾಲಿ ಕಟ್ಟಡಗಳಿದ್ದಲ್ಲಿ ಸದರಿ ಕಟ್ಟಡಗಳನ್ನು ಈ ಕಚೇರಿಯಿಂದ ಸಕ್ರಮಗೊಳಿಸಲಾಗಿದೆ ಎಂದು ಭಾವಿಸತಕ್ಕದ್ದಲ್ಲ.
16. ಸದರಿ ವಿನ್ಯಾಸದಲ್ಲಿ ಅಳವಡಿಸಿರುವ ಕಟ್ಟಡರೇಖೆಯನ್ನು ಬಿಟ್ಟು ಕಟ್ಟಡವನ್ನು ನಿರ್ಮಿಸಿಕೊಳ್ಳಲು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯು ಅನುಮತಿ ನೀಡತಕ್ಕದ್ದು & ನಿವೇಶನಗಳ ಮಾಲೀಕರು ಸದರಿ ವಿನ್ಯಾಸದಲ್ಲಿ ಅಳವಡಿಸಿರುವ ಕಟ್ಟಡ ರೇಖೆಯನ್ನು ಬಿಟ್ಟು ಕಟ್ಟಡವನ್ನು ನಿರ್ಮಿಸಿಕೊಳ್ಳತಕ್ಕದ್ದು ಮತ್ತು ನಿಯಂತ್ರಣ ರೇಖೆಯನ್ವಯ ಕ್ರಮ ವಹಿಸತಕ್ಕದ್ದು.

17. ಸದರಿ ಜಮೀನಿನಲ್ಲಿರುವ ಹಾಲಿ ಕಟ್ಟಡಗಳಿಗೆ ಮುನಿಸಿಪಲ್ / ಪಂಚಾಯತ ರಾಜ್ ಕಾಯ್ದೆಯಂತೆ ಕ್ರಮ ಕೈಗೊಂಡು ನಂತರವೇ ಪುರಸಭೆ / ಪಟ್ಟಣ ಪಂಚಾಯತಿ / ಗ್ರಾಮ ಪಂಚಾಯತಿಯು ವಿನ್ಯಾಸಕ್ಕೆ ಅನುಮೋದನೆ ನೀಡುವುದು.
18. ಸದರಿ ಜಮೀನಿನಲ್ಲಿರುವ ಕಟ್ಟಡ ರೇಖೆ ಹಾಗೂ ನಿಯಂತ್ರಣ ರೇಖೆ ಹಾಗೂ ನಡು ಜಾಗೆ (set back) ಪ್ರದೇಶದಲ್ಲಿರುವ ಹಾಲಿ ಕಟ್ಟಡಗಳನ್ನು ನಿಯಮಾನುಸಾರ ಹಾಗೂ ಸಂಬಂಧಿಸಿದ ರಸ್ತೆ ಇಲಾಖೆಯ ನಿಯಮಾವಳಿಗಳನ್ವಯ ತೆರವುಗೊಳಿಸಲು ಸ್ಥಳೀಯ ಸಂಸ್ಥೆಯು ಕ್ರಮ ವಹಿಸತಕ್ಕದ್ದು.
19. ಈ ವಿನ್ಯಾಸದಲ್ಲಿ ಕಟ್ಟಡ ಕಟ್ಟುವ ಮೊದಲು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ಅನುಮತಿ ಪತ್ರ ಪಡೆಯತಕ್ಕದ್ದು.
20. ಸದರಿ ಜಮೀನಿನಲ್ಲಿ ಹಾಯ್ದು ಹೋಗಿರುವ ಕಾಲುವೆ / ಝುರಿಗೆ ನಿಯಾಮಾನುಸಾರ ಸಂಬಂಧಪಟ್ಟ ಇಲಾಖೆಯ ಅನುಮತಿ ಪಡೆದು Culvert / Cross drainage works ನ್ನು ನಿರ್ಮಿಸುವುದು.
21. ನೈಸರ್ಗಿಕವಾಗಿ ಹರಿಯುವ ನದಿ / ಹಳ್ಳ ಹಾಗೂ ಕೆರೆ ಮುಂತಾದವುಗಳಿಗೆ ವಿನ್ಯಾಸದಲ್ಲಿನ ಯಾವುದೇ ಮಲೀನ ನೀರನ್ನು ಹರಿಯ ಬಿಡಬಾರದು.
22. ಅನುಮೋದಿತ ವಿನ್ಯಾಸದ ಸೂಕ್ತ ಸ್ಥಳಗಳಲ್ಲಿ ನೀರು ಇಂಗುಗುಳಿ (water Recharge) ಮತ್ತು ಮಳೆ ನೀರು ಸಂಗ್ರಹಣೆ (Rain water harvesting pits) ಗಳನ್ನು ಗುರ್ತಿಸಿ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
23. **ವಿನ್ಯಾಸ ಅಂಗೀಕಾರ ಸಂಬಂಧ ಇತರೆ ಯಾವುದೇ ಸಂಬಂಧಿಸಿದ ಇಲಾಖೆಯಿಂದ ಅಭಿಪ್ರಾಯ / ನಿರಾಕ್ಷೇಪಣಾ ಪತ್ರ ಪಡೆಯಬೇಕಾದ್ದಲ್ಲಿ ಅರ್ಜಿದಾರರಿಂದ ಅಂತಹ ನಿರಾಕ್ಷೇಪಣಾ ಪತ್ರವನ್ನು ಸ್ಥಳೀಯ ಸಂಸ್ಥೆಯು ಕಡ್ಡಾಯವಾಗಿ ಪಡೆಯತಕ್ಕದ್ದು.**
24. ಸದರಿ ವಿನ್ಯಾಸದ ಜಮೀನುಗಳಲ್ಲಿ ಕಂದಾಯ ಇಲಾಖೆಯನ್ವಯ ಇರುವ 'ಬ' ಖರಾಬು ಪ್ರದೇಶವು ಇದ್ದಲ್ಲಿ ಸರ್ಕಾರಕ್ಕೆ ಸೇರಿದ್ದು, ಯಾವುದೇ ಒತ್ತುವರಿಗೆ ಅವಕಾಶವಿಲ್ಲದಂತೆ ಯಥಾ ರೀತಿ ಕಾಯ್ದಿರಿಸತಕ್ಕದ್ದು.
25. ಅನುಮೋದಿತ ಬಡಾವಣೆಯಲ್ಲಿ **ಕೊಳವೆ ಬಾವಿಯನ್ನು ಕೊರೆಯುವಾಗ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ** ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು, ಹಾಗೂ ತೆರೆದ ಕೊಳವೆ ಬಾವಿಗಳ ಬಗ್ಗೆ ಭೂ ಮಾಲೀಕರುಗಳು ಮತ್ತು ಸ್ಥಳೀಯ ಸಂಸ್ಥೆಗಳು ಸಂರಕ್ಷಣೆ ಮಾಡಲು ದಿನಾಂಕ:-31-12-2012 ಮತ್ತು ದಿನಾಂಕ:-06-08-2014 ರಂದು ಸರ್ಕಾರವು ನೀಡಿರುವ ನಿರ್ದೇಶನಗಳಂತೆ ತಪ್ಪದೆ ಕ್ರಮ ವಹಿಸತಕ್ಕದ್ದು.
26. ಸದರಿ ಬಡಾವಣೆಯಲ್ಲಿ ಸುತ್ತಲೂ ಕಾಂಪೌಂಡ್ ನಿರ್ಮಿಸಿ, ಗೇಟನ್ನು ಅಳವಡಿಸಿ **"ಗೇಟೆಡ್ ಕಮ್ಯುನಿಟಿ"** ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ **ಮಾಡುವುದನ್ನು ನಿಷೇಧಿಸಲಾಗಿದೆ** ಹಾಗೂ ಸದರಿ ಬಡಾವಣೆಯಲ್ಲಿನ ರಸ್ತೆ, ಆಟದ ಮೈದಾನ / ಉದ್ಯಾನವನ / ಬಯಲುಜಾಗೆ / ವಾಹನ ನಿಲುಗಡೆ ಜಾಗೆಗಳು ಸಾರ್ವಜನಿಕ ಸ್ವತ್ತಾಗಿರುತ್ತದೆ, ಆದ್ದರಿಂದ ಸಾರ್ವಜನಿಕ ಸ್ವತ್ತುಗಳನ್ನು ಮುಕ್ತವಾಗಿಡತಕ್ಕದ್ದು.
27. ಈ ಅನುಮೋದಿತ ವಿನ್ಯಾಸ ನಕ್ಷೆಯು ನಿಗದಿಪಡಿಸಲಾದ ಮಾಪನ / ಅಳತೆಗಳಲ್ಲಿ ವ್ಯತ್ಯಾಸ ಇರುವುದು ಕಂಡು ಬಂದಲ್ಲಿ ಅದನ್ನು ಸೂಕ್ತವಾಗಿ ಸ್ಥಳದ ವಸ್ತು ಸ್ಥಿತಿ ಹಾಗೂ ಅಳತೆ ಪರಿಮಾಣಕ್ಕೆ ಅನುಗುಣವಾಗಿ ಪರಿಷ್ಕೃತ ವಿನ್ಯಾಸಕ್ಕೆ ಅನುಮೋದನೆ ಪಡೆದುಕೊಳ್ಳತಕ್ಕದ್ದು.
28. ಈ ಅನುಮೋದನೆಯು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವುದಕ್ಕೆ ಉಪಯೋಗಿಸಲು ಬರುವುದಿಲ್ಲ.
29. ಜಿಲ್ಲಾಧಿಕಾರಿಗಳು ಹೊರಡಿಸಿರುವ ಆದೇಶದನ್ವಯ ಮತ್ತು ಕಂದಾಯ ಇಲಾಖೆ ದೃಢೀಕರಿಸಿರುವ ಸರ್ವೆ ನಕ್ಷೆಯನ್ವಯ ವಿನ್ಯಾಸವನ್ನು ಸಿದ್ಧಪಡಿಸಲಾಗಿದ್ದು, ಸರ್ವೆ ನಕ್ಷೆಯಲ್ಲಿ ನ್ಯೂನ್ಯತೆಗಳಿದ್ದರೆ ಈ ಇಲಾಖೆಯು ಜವಾಬ್ದಾರಿಯಾಗಿರುವುದಿಲ್ಲ.
30. ವಿನ್ಯಾಸದ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಯು ತಪ್ಪಾಗಿದ್ದಲ್ಲಿ / ಫೋರ್ಜರಿ / ನಕಲಿ ಆಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಈ ತಾಂತ್ರಿಕ ಅನುಮೋದನೆ ತನ್ನಿಂದ ತಾನಾಗಿ ರದ್ದುಗೊಳ್ಳುತ್ತದೆ ಹಾಗೂ ಪ್ರಕರಣಕ್ಕೆ / ಪ್ರಶ್ನಿತ ಜಮೀನುಗಳಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ.
31. ಗ್ರಾಮ ಪಂಚಾಯಿತಿಯು ಸದರಿ ವಿನ್ಯಾಸಕ್ಕೆ ಅನುಮೋದನೆ ಹಾಗೂ ಕಟ್ಟಡ ಪರವಾನಿಗೆಗೆ ಸಂಬಂಧಿಸಿದಂತೆ ನಿಯಮಾನುಸಾರ ಸರ್ಕಾರದ ಅಧಿಸೂಚನೆ ಸಂಖ್ಯೆ:-ಎಫ್‌ಇಇ 205 ಇಪಿಸಿ 2018, ದಿನಾಂಕ:-09-09-2020 ರನ್ವಯ ಅರ್ಜಿದಾರರಿಂದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೀಡುವ Consent For Establishment (CFE) ನಿರಾಕ್ಷೇಪಣಾ ಪತ್ರವನ್ನು ತಪ್ಪದೇ ಪಡೆದು ನಿಯಮಾನುಸಾರ ಸೂಕ್ತ ಕ್ರಮವಹಿಸತಕ್ಕದ್ದು.
32. ಈ ವಸತಿ ಬಹುನಿವೇಶನ ವಿನ್ಯಾಸವನ್ನು ಜಿಲ್ಲಾಧಿಕಾರಿಗಳು, ಧಾರವಾಡ., ಇವರ ಭೂ ಪರಿವರ್ತನೆ ಆದೇಶ ಹಾಗೂ ಕಂದಾಯ ಇಲಾಖೆಯಿಂದ ಮತ್ತು ಭೂ ಮಾಪನಾ ಮತ್ತು ಭೂ ದಾಖಲೆಗಳ ಇಲಾಖೆಯಿಂದ ನೀಡಿರುವ ದಾಖಲೆಗಳು / ಸರ್ವೆನಕ್ಷೆ / ಪಿ.ಟಿ.ಶೀಟ್ ನಕ್ಷೆಯನ್ವಯ ಹಾಗೂ ಸ್ಥಳೀಯ ಸಂಸ್ಥೆ / ಅರ್ಜಿದಾರರು ಸಲ್ಲಿಸಿರುವ ಮಾಹಿತಿ / ದಾಖಲೆಗಳನ್ವಯ ಹಾಗೂ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ., ರವರ ಪ್ರಸ್ತಾವನೆ ಹಾಗೂ ಶಿಫಾರಸ್ಸಿನನ್ವಯ ಹಾಗೂ ಅರ್ಜಿದಾರರ ಮನವಿ ವಿನ್ಯಾಸ ನಕ್ಷೆಯನ್ನು ಸೂಕ್ತವಾಗಿ ಮಾರ್ಪಡಿಸಿ ಈ ವಿನ್ಯಾಸ ನಕ್ಷೆಯನ್ನು ತಯಾರಿಸಲಾಗಿರುತ್ತದೆ.

೩೩. ಸದರಿ ವಿನ್ಯಾಸಕ್ಕೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಕಾರ್ಯಾಲಯ, ದೇವರಗುಡಿಹಾಳ, ತಾ:ಹುಬ್ಬಳ್ಳಿ., ಯಿಂದ ಅನುಮೋದನೆಯಾದ ನಂತರ, ಅನುಮೋದನೆ ಪತ್ರ, ಅನುಮೋದಿತ ವಿನ್ಯಾಸ ನಕ್ಷೆಯ ಪ್ರತಿಯನ್ನು ಸದರಿ ಗ್ರಾಮ ಪಂಚಾಯತ ಕಾರ್ಯಾಲಯದಿಂದ ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು.

ಅಪರ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ,
ಧಾರವಾಡ.

ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ:-

1) ತಾಂತ್ರಿಕವಾಗಿ ಅನುಮೋದಿಸಲಾದ ವಿನ್ಯಾಸ ನಕ್ಷೆಯ ೩ ಪ್ರತಿಗಳೊಂದಿಗೆ **ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಕಾರ್ಯಾಲಯ, ದೇವರಗುಡಿಹಾಳ, ತಾ:ಹುಬ್ಬಳ್ಳಿ, ಜಿ॥ಧಾರವಾಡ.**, ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ ಹಾಗೂ ವಿನ್ಯಾಸಕ್ಕೆ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾಯ್ದೆಯಡಿಯಲ್ಲಿ ಅನುಮೋದಿಸಿದ ನಂತರ ಒಂದು ಪ್ರತಿಯನ್ನು (ಆದೇಶದೊಂದಿಗೆ) ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ., ರವರ ಕಚೇರಿಗೆ ಕಳುಹಿಸುವಂತೆ ಕೋರಿದೆ.

ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ:-

2) **ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು.**, ರವರಿಗೆ ತಾಂತ್ರಿಕ ಅನುಮೋದಿತ ವಿನ್ಯಾಸ ನಕ್ಷೆಯೊಂದಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
3) **ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ.**, ಇವರಿಗೆ ತಾಂತ್ರಿಕ ಅನುಮೋದಿತ ವಿನ್ಯಾಸ ನಕ್ಷೆಯೊಂದಿಗೆ ಕಳುಹಿಸುತ್ತಾ ನಿಯಮಾನುಸಾರ ಇಲಾಖಾ ಕಾರ್ಯಕ್ರಮದನ್ವಯ ಸದರಿ ವಿನ್ಯಾಸ ನಕ್ಷೆಯನ್ನು ಮೂಲ ನಕ್ಷೆಯಲ್ಲಿ ಕಾಲೋಚಿತಗೊಳಿಸಲು ಸೂಚಿಸಲಾಗಿದೆ.
4) ಅರ್ಜಿದಾರರಾದ **ಶ್ರೀ ಪಾತ್ರುಟ ಮಂಜುನಾಥ** ತಂದೆ ಲಕ್ಷ್ಮಣ ಹಾಗೂ ಇತರರು ಪರವಾಗಿ **ಸ್ಕೈ ಟೌನ್ ಪ್ರಾಪರ್ಟಿಸ್ ಪ್ರೈ ಲಿ ಬೆಂಗಳೂರು., ಇದರ ತರ್ಫೆ ಡೈರೆಕ್ಟರ್ ಆದ ಶ್ರೀ ಚೇತನ** ಪವಾರ ತಂದೆ **ಶ್ರೀಧರ. ಸಾ:ನವನಗರ, ಹುಬ್ಬಳ್ಳಿ, ಜಿ:ಧಾರವಾಡ.**, ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ. ಹಾಗೂ ಅನುಮೋದಿತ ವಿನ್ಯಾಸ ನಕ್ಷೆಯ ಪ್ರತಿಯನ್ನು ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಕಾರ್ಯಾಲಯ, ದೇವರಗುಡಿಹಾಳ, ತಾ:ಹುಬ್ಬಳ್ಳಿ, ಜಿ॥ಧಾರವಾಡ., ಇವರಿಂದ ನಿಬಂಧನೆಗಳನ್ನು ಅನುಸರಿಸಿ ಪಡೆಯಲು ಸೂಚಿಸಿದೆ.
5) ವಿನ್ಯಾಸ ಪತ್ರಗಳ ಮಾಸ್ಟರ್ ಕಡತಕ್ಕೆ ಮಾಹಿತಿಗಾಗಿ ನಕ್ಷೆಯ ಪ್ರತಿಯೊಂದಿಗೆ ಕಳುಹಿಸಲಾಗಿದೆ.
6) ಕಛೇರಿ ಪ್ರತಿ.

30/10

ಅಪರ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ,
ಧಾರವಾಡ.